Valid for 10 years
Renewal (2035 year)

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ

ಸಂಖ್ಯೆ:ಸಕಾಇಂ:ಉನಂ1:ಲೋಉಇ:ಬೆಉವಿ:ತಾಂಸ:2025-26/158

ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ನಂ 1 ಲೋ.ಇ ದಕ್ಷಿಣ ಉಪವಿಭಾಗ,
ಕೆ.ಆರ್.ವೃತ್ತ, ಬೆಂಗಳೂರು.
ದಿನಾಂಕ: 9/9/2025

ರವರಿಗೆ,

**Principal**
**Koshys Global Academia**
**Kadusonnappanahalli,**
**Kannur Post, Bangalore-562149**

ಮಾನ್ಯರೇ,

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಕಾಡುಸೊಣ್ಣಪ್ಪನಹಳ್ಳಿ ಕಣ್ಣೂರು. ಇಲ್ಲಿರುವ **Koshys Global Academia** ಶಾಲೆ ಕಟ್ಟಡಕ್ಕೆ ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂಖ್ಯೆ: ಲೋಇ 59 ಬಿಇಡಿ 2019, ದಿನಾಂಕ: 07-05-2022
2. ಸರ್ಕಾರದ ಸುತ್ತೋಲೆ ಸಂಖ್ಯೆ: ಲೋಇ 59 ಬಿಇಡಿ 2019, ದಿನಾಂಕ: 25-09-2024
3. ನಿಮ್ಮ ಪತ್ರದ ದಿನಾಂಕ: 04-09-2025.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಕಾಡುಸೊಣ್ಣಪ್ಪನಹಳ್ಳಿ ಕಣ್ಣೂರು, ಬೆಂಗಳೂರು-562149. ಇಲ್ಲಿರುವ **Koshys Global Academia** ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು ಶಿಕ್ಷಣ ಇಲಾಖೆಗೆ ಒದಗಿಸಲು ಅಗತ್ಯವಿರುವುದಾಗಿ ತಿಳಿಸಿ ಕಟ್ಟಡದ ಸುರಕ್ಷಾ ಪ್ರಮಾಣ ಪತ್ರ ನೀಡಲು ಉಲ್ಲೇಖಿತ (3) ರ ಪತ್ರದಲ್ಲಿ ಮನವಿಯನ್ನು ಸಲ್ಲಿಸಿರುತ್ತೀರಿ.

ಸದರಿ ಕಟ್ಟಡದ ನಕ್ಷೆಯನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕಣ್ಣೂರು ಗ್ರಾಮ ಪಂಚಾಯಿತಿ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು ರವರು ಅನುಮೋದನೆ ನೀಡಿರುತ್ತಾರೆ. ಸದರಿ Academic Block ನಲ್ಲಿ ತಳ ಮಹಡಿ, ನೆಲಮಹಡಿ ಮತ್ತು ಮೊದಲನೇ ಮಹಡಿಗಳನ್ನು ಒಳಗೊಂಡಂತೆ 2023-24 ನೇ ಸಾಲಿನಲ್ಲಿ ನಿರ್ಮಿಸಲಾಗಿರುತ್ತದೆ.

ಸದರಿ ಕಟ್ಟಡದ ಭೌತಿಕ ಸ್ಥಿತಿಯನ್ನು ದಿನಾಂಕ:08-09-2025 ರಂದು ಖುದ್ದಾಗಿ ಭೇಟಿ ನೀಡಿ ಶಾಲಾ ಕಟ್ಟಡವನ್ನು ಪರಿಶೀಲಿಸಲಾಗಿದ್ದು, ಕಟ್ಟಡದ ಸಧೃಡತೆಯ ಬಗ್ಗೆ NDT ಪರೀಕ್ಷೆಯನ್ನು 04-09-2025ರ ಮಾಹೆಯಲ್ಲಿ **Nishicon** Infrastructures, # 317/19, 1st G cross, subbanna Garden, R.P.C.Layout(west)Extn, Vijayanagara, Bengaluru-560040. ಇವರ ಮುಖಾಂತರ ಪರೀಕ್ಷೆಗಳನ್ನು ಕೈಗೊಂಡು ವರದಿಯ ಪ್ರತಿಯನ್ನು ಸಲ್ಲಿಸಿರುತ್ತಾರೆ. ಸದರಿಯವರು ನಡೆಸಲಾದ ಪರೀಕ್ಷೆಯ ವರದಿಯಂತೆ ಕಟ್ಟಡವು ಸದೃಢತೆಯಿಂದ ಇರುವುದು ಕಂಡು ಬಂದಿರುತ್ತದೆ.

ಉಲ್ಲೇಖಿತ (1) ರ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಕಟ್ಟಡ ಸುರಕ್ಷತೆ ಪ್ರಮಾಣ ಪತ್ರವನ್ನು ವಿತರಿಸಲು ಮೊತ್ತ ರೂ.5,000/- (ರೂ.ಐದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಬೆಂಗಳೂರು ಪೂರ್ವ ತಾಲ್ಲೂಕು ಬಿದರಹಳ್ಳಿ ಹೋಬಳಿ, ಕಾಡುಸೊಣ್ಣಪ್ಪನಹಳ್ಳಿ ಗ್ರಾಮದಲ್ಲಿರುವ **Koshys Global Academia** HDFC, BANK ಡಿ.ಡಿ ಸಂಖ್ಯೆ:000690, ದಿನಾಂಕ:06-09-2025 ರಲ್ಲಿ ಈ ಕಛೇರಿಗೆ ಪಾವತಿಸಿರುತ್ತಾರೆ. ಸದರಿ ಕಟ್ಟಡದಲ್ಲಿ **Koshys Global Academia, Kadusonnappanahalli, Kannur Post, Bangalore -562149.** ರವರು ಒದಗಿಸಿರುವ ಮಾಹಿತಿಯಂತೆ ಕೊಠಡಿಗಳ ಸಂಖ್ಯೆ ಈ ಕೆಳಗಿನಂತಿರುತ್ತದೆ.

PRINCIPAL
KOSHYS GLOBAL ACADEMIA
# 44/4, Kadusonnappanahalli,
Kannur Post, Hennur Bagalur Road,

CHAIRMAN
KOSHYS GLOBAL ACADEMIA
# 44/4, Kadusonnappanahalli,
Kannur Post, Hennur Bagalur Road,

Scanned with OKEN Scanner

| Sl. No. | Academic Block | ಕೊಠಡಿಗಳ ವಿವರಗಳು | | |
|---|---|---|---|---|
| 1 | Academic Block | Basement Floor<br>Class Rooms - 01<br>Toilet - 02<br>Other Rooms - 03 | Ground Floor<br>Class Rooms - 12<br>Toilet - 05<br>Other Rooms - 07 | First Floor<br>Class Rooms - 09<br>Toilet - 04<br>Other Rooms - 07 |

ಮುಂದುವರೆದು, ಉಲ್ಲೇಖಿತ (2) ರ ಸರ್ಕಾರದ ಸುತ್ತೋಲೆಯ ಕ್ರಮ ಸಂಖ್ಯೆ: ಅ) - ಕಂಡಿಕೆ (1) ರಲ್ಲಿ "ಕಟ್ಟಡದ ಜೀವಿತಾವಧಿಯು 15 ವರ್ಷಗಳಿಗಿಂತ ಕಡಿಮೆ ಇದ್ದಂತಹ ಸಂದರ್ಭದಲ್ಲಿ ಸುತ್ತೋಲೆ ದಿನಾಂಕ: 07-05-2022 ರಲ್ಲಿ ತಿಳಿಸಿದಂತಹ ಕ್ರಮಗಳನ್ನು ಅನುಸರಿಸಿ ಸೂಕ್ತವೆಂದು ಕಂಡುಬಂದ ನಂತರ Structural Stability ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡುವಾಗ ಪ್ರಮಾಣ ಪತ್ರದ ಚಾಲ್ತಿ ಅವಧಿಯನ್ನು ಕಟ್ಟಡದ ಸಾಮರ್ಥ್ಯಕ್ಕೆ ಅನುಸಾರವಾಗಿ ಸೂಕ್ತವಾಗಿ ನಿರ್ಧರಿಸಿ ಗರಿಷ್ಠ 10 ವರ್ಷಗಳಿಗೆ ನಿಗಧಿಪಡಿಸಲು" ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿರುತ್ತದೆ.

ಸದರಿ ಕಟ್ಟಡದ ಭೌತಿಕ ಸ್ಥಿತಿಯನ್ನು ದಿನಾಂಕ:08-09-2025 ರಂದು ಖುದ್ದಾಗಿ ಭೇಟಿ ನೀಡಿ ಶಾಲಾ ಕಟ್ಟಡವನ್ನು ಪರಿಶೀಲಿಸಲಾಗಿದ್ದು, **Nishicon** Infrastructures, # 317/19, 1st G cross, subbanna Garden, R.P.C.Layout(west)Extn, Vijayanagara, Bengaluru-560040. ರವರ ವರದಿಯಂತೆ ಕಟ್ಟಡವು ಸದೃಢವಾಗಿರುತ್ತದೆ. ಕಟ್ಟಡಕ್ಕೆ ಕಾಲಕಾಲಕ್ಕೆ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳುವ ಅವಶ್ಯಕತೆ ಇರುತ್ತದೆ. ಕಟ್ಟಡದಲ್ಲಿ ಉಂಟಾಗಿರುವ ಗೋಡೆಗಳಲ್ಲಿನ Cracks ಗಳನ್ನು Grouting ಅನ್ನು ಬಳಸಿಕೊಂಡು ದುರಸ್ಥಿ ಪಡಿಸುವುದು ಹಾಗೂ ಕಟ್ಟಡದ ಮೇಲ್ಮಹಡಿಯಲ್ಲಿ ಜಲನಿರೋಧಕ (Water Proofing)ವನ್ನು ಅಳವಡಿಸಲು ತಿಳಿಸಲಾಯಿತು. ಮೇಲ್ಮಹಡಿಗೆ ಹೋಗುವ ದ್ವಾರದಲ್ಲಿ ಬಾಗಿಲು ಅಥವ ಗೇಟ್ ಅಳವಡಿಸದಿರುವುದು ಕಂಡು ಬಂದಿದ್ದು, ವಿದ್ಯಾರ್ಥಿಗಳು ಮೇಲ್ಮಹಡಿಗೆ ಪ್ರವೇಶಿಸುವುದನ್ನು ನಿರ್ಬಂಧಿಸಲು ಬಾಗಿಲು ಅಥವ ಗೇಟನ್ನು ಅಳವಡಿಸಲು ತಿಳಿಸಲಾಯಿತು ಹಾಗೂ "Fire Safety Certificate" ಅನ್ನು ಸಂಬಂಧಪಟ್ಟ ಮುಖ್ಯ ಅಗ್ನಿಶಾಮಕ ಅಧಿಕಾರಿಯವರಿಂದ ಪಡೆಯತಕ್ಕದ್ದು.

ಮೇಲ್ಕಂಡ ಎಲ್ಲಾ ಷರತ್ತಿಗೊಳಪಟ್ಟು ಪ್ರಸಕ್ತ ಶೈಕ್ಷಣಿಕ ಮೂರು ವರ್ಷಕ್ಕೆ (03) ಶೈಕ್ಷಣಿಕ ಉದ್ದೇಶಕ್ಕಾಗಿ ಉಪಯೋಗಿಸಲು ಶಾಲಾ ಕಟ್ಟಡಕ್ಕೆ ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಇಂಜನಿಯರ್
ನಂ 1 ಲೋ.ಇ ಕಟ್ಟಡ ಉಪವಿಭಾಗ,
ಬೆಂಗಳೂರು.

CHAIRMAN
KOSHYS GLOBAL ACADEMIA
# 44/4, Kadusonnappanahalli,
Kannur Post, Hennur - Bagalur Road,
Bengaluru - 560077

PRINCIPAL
KOSHYS GLOBAL ACADEMIA
# 44/4, Kadusonnappanahalli,
Kannur Post, Hennur - Bagalur Road,
Bengaluru - 560077

Scanned with OKEN Scanner